

# ಕಲ್ಯಾಣಮಂಟಪದಲ್ಲಿ ಕಿಡ್ನ್ಯಾಪ್!

ಗಿರೀಶ ಕಂಪ್ಲಾಪುರ ನಿರ್ದೇಶನದ ಹೊಸ ಚಿತ್ರ 'ವರ್ಮ' ಕಳೆದ ವಾರ ಸೆಟ್ಟೇರಿದೆ. ರವಿ ತಮ್ಮಣ್ಣ ಅವರ ಕಥೆಯನ್ನು ಒಳಗೊಂಡಿರುವ ಈ ಸಿನಿಮಾದ ಮೂಲಕ ಗಿರೀಶ್ ನಿರ್ಮಾಪಕರೂ ಆಗುತ್ತಿದ್ದಾರೆ.

ನಿಶ್ಚಿತಾರ್ಥ ನಡೆಯಬೇಕಿದ್ದ ಯುವತಿಯನ್ನು ಕಲ್ಯಾಣ ಮಂಟಪದಿಂದ ಅಪಹರಿಸುವ ಕಥೆ 'ವರ್ಮ' ಚಿತ್ರದಲ್ಲಿದೆಯಂತೆ. ನಿಶ್ಚಿತಾರ್ಥ ಆಗಬೇಕಿದ್ದ ಹುಡುಗ–ಹುಡುಗಿ ಹಾಗೂ ಅಪಹರಣಕಾರನ ಪಾತ್ರಗಳ ನಡುವಿನ ಸಂಘರ್ಷವನ್ನು ಗಿರೀಶ್ ಚಿತ್ರೀಕರಿಸುತ್ತಿದ್ದಾರೆ. ಈ ಮೂರು ಮುಖ್ಯಪಾತ್ರಗಳಲ್ಲಿ ನವೀನ್ ಹಾಸನ, ವರ್ಷಿತ ಹಾಗೂ ರಿಷಾಂತ್ ತಿವಾರಿ ನಟಿಸುತ್ತಿದ್ದಾರೆ. ಹಿರಿಯ ನಟ ಜೈಜಗದೀಶ್, ಯತಿರಾಜ್, ಬೇಬಿ ಅಮೋಘ ಹಾಗೂ ಎಂ.ಎನ್. ಸುರೇಶ್ ತಾರಾಗಣದಲ್ಲಿರುವ ಇತರರು.

ಅಪಹರಣದ ಕಥೆಯ ಮೂಲಕ ಮನುಷ್ಯ ಸ್ವಭಾವದ ಹಲವು ಆಯಾಮಗಳನ್ನು ವಿಶ್ಲೇಷಿಸುವುದು ನಿರ್ದೇಶಕರ ಉದ್ದೇಶ. ಕೌತುಕದ ಜೊತೆಗೆ ಮನರಂಜನೆಯ ಅಂಶಗಳೂ ಚಿತ್ರದಲ್ಲಿ ಸಾಕಷ್ಟಿವೆಯಂತೆ. ಸಿನಿಮಾದಲ್ಲಿನ ಪ್ರತಿ ಹಾಡನ್ನೂ ಬೇರೆ ಬೇರೆ ಸಂಗೀತ ನಿರ್ದೇಶಕರಿಂದ ಸಂಯೋಜಿಸಲು ಗಿರೀಶ್ ಉದ್ದೇಶಿಸಿದ್ದಾರೆ. ಸದ್ಯಕ್ಕೆ ಅರ್ಚನಾ ಉಡುಪ ಹಾಗೂ ಚಂದನ್ ಶೆಟ್ಟಿ ಅವರಿಂದ ತಲಾ ಒಂದು ಗೀತೆ ರೂಪಿಸಲು ಯೋಚಿಸಿದ್ದಾರೆ. ಬೆಂಗಳೂರಿನ ಜೊತೆಗೆ ದಾಂಡೇಲಿ ಹಾಗೂ ಗೋಕಾಕದ ಸುಂದರ ಪರಿಸರದಲ್ಲಿ 'ವರ್ಮ' ಚಿತ್ರೀಕರಣ ನಡೆಯಲಿದೆ.

# ಶಂಕರ್ ಅಭಿಮಾನಿಯ ಪ್ರೇಮಕಥೆ

ಶಂಕರ್‌ನಾಗ್ ಅವರ ವ್ಯಕ್ತಿತ್ವ–ಸಾಧನೆಯನ್ನು ಪ್ರೇರಣೆಯಾಗುಳ್ಳ ಕಥೆಯ ಸಿನಿಮಾಗಳು ಕನ್ನಡ ಚಿತ್ರರಂಗಕ್ಕೆ ಹೊಸತಲ್ಲ. ಉಪೇಂದ್ರ, ಗಣೇಶ್ ಸೇರಿದಂತೆ ಅನೇಕ ನಟರು 'ಆಟೋರಾಜ' ನನ್ನು ನೆನಪಿಸುವ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ಸಾಲಿಗೆ ಹೊಸ ಸೇರ್ಪಡೆ ವಿಜಯ ರಾಘವೇಂದ್ರ.

ವಿಜಯ್ ನಟನೆಯ 'ನನ್ನ ನಿನ್ನ ಪ್ರೇಮಕಥೆ' ಚಿತ್ರದಲ್ಲಿ ಶಂಕರನಾಗ್ ನೆನಪುಗಳಿವೆ. ಈ ಚಿತ್ರದ ನಾಯಕ ಶಂಕರ್ ಅವರ ಅಪ್ಪಟ ಅಭಿಮಾನಿಯಂತೆ. ಆರ್ಕೆಸ್ಟ್ರಾದಲ್ಲಿ ಹಾಡುಗಾರನಾದ ಈ ನಾಯಕನಿಗೂ ಶ್ರೀಮಂತ ಕುಟುಂಬದ ನಾಯಕಿಗೂ ಪ್ರೇಮ ಉಂಟಾಗುತ್ತದೆ. ಉತ್ತರ ದಕ್ಷಿಣ ಧ್ರುವಗಳಂಥ ತರುಣ ತರುಣಿಯ ಪ್ರೇಮಕಥೆ ಎಂದ ಮೇಲೆ ಚಿತ್ರಕಥೆಯಲ್ಲಿ ಸಾಕಷ್ಟು ತಿರುವುಗಳು ಇರಲೇಬೇಕಲ್ಲವೇ? 'ಹೌದು' ಎನ್ನುತ್ತಾರೆ ನಿರ್ದೇಶಕ ಶಿವು ಜಮಖಂಡಿ.

ಮೂಲತಃ ಉತ್ತರ ಕರ್ನಾಟಕದವರಾದ ಶಿವು ತಮ್ಮ ಪ್ರಾದೇಶಿಕ ಪ್ರೇಮವನ್ನು ಸಾಬೀತುಪಡಿಸುವಂತೆ ಪ್ರೇಮಕಥೆಯನ್ನು ವಿಜಯಪುರದ ರಮ್ಯ ಪರಿಸರದಲ್ಲಿ ಚಿತ್ರೀಕರಿಸಿದ್ದಾರೆ. ವಿಜಯಪುರದ ಗೋಲ್‌ಗುಂಬಜ್, ಇಬ್ರಾಹಿಂ ರೋಜಾಗಳು ಚಿತ್ರದ ಸೌಂದರ್ಯವನ್ನು ಹೆಚ್ಚಿಸಿವೆಯಂತೆ.

ವಿಜಯ್‌ಗೆ ಜೋಡಿಯಾಗಿ ನಿಧಿ ಸುಬ್ಬಯ್ಯ ಅಭಿನಯಿಸಿರುವುದು ಪ್ರೇಮಕಥೆಯ ವಿಶೇಷ. ಬಾಲಿವುಡ್‌ನಲ್ಲಿ ಅವಕಾಶಗಳನ್ನು ಹುಡುಕಿಕೊಂಡು ಹೋಗಿದ್ದ ನಿಧಿ, ಇದೀಗ ಶಿವು ಅವರ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಮರಳಿದ್ದಾರೆ.

